
# ಶ್ರೀರಾಮಕೃಷ್ಣರ ವೇದಾಂತ ದರ್ಶನ

ಸ್ವಾಮಿ ಹರ್ಷಾನಂದ



## ಪೀಠಿಕೆ

ಭಗವಂತನ ಸೃಷ್ಟಿಯಲ್ಲಿ ಕೇವಲ ಮಾನವನು ಮಾತ್ರ ಬುದ್ಧಿಜೀವಿ. ಜೀವನಕ್ಕೆ ಅವಶ್ಯಕವಾದ ವಸ್ತುಗಳ ಪೂರೈಕೆಯಾದ ಮೇಲೆ ತತ್ತ್ವಚಿಂತನೆ ಮಾಡುವ ಸಾಧ್ಯತೆ, ಶಕ್ತಿ ಇರುವುದು ಅವನಿಗೆ ಮಾತ್ರ. ಭಾರತದೇಶದಲ್ಲಿ ಸಹಸ್ರಾರು ವರ್ಷಗಳಿಂದ ಬೆಳೆದು ಬಂದಿರುವ, ಈಗಲೂ ಪ್ರಚಲಿತವಾಗಿರುವ, ಈ ತತ್ತ್ವಚಿಂತನೆ ಆರು ಕವಲುಗಳಾಗಿ ಒಡೆದಿದೆ. ಅವುಗಳನ್ನು 'ದರ್ಶನ' ಎಂದು ಕರೆಯುತ್ತಾರೆ. ಅವು ಯಾವುವೆಂದರೆ: **ನ್ಯಾಯದರ್ಶನ, ವೈಶೇಷಿಕ ದರ್ಶನ, ಸಾಂಖ್ಯ ದರ್ಶನ, ಯೋಗ ದರ್ಶನ, ಮೀಮಾಂಸಾ ದರ್ಶನ ಮತ್ತು ವೇದಾಂತ ದರ್ಶನ.**

ಶ್ರೀರಾಮಕೃಷ್ಣರ ಬೋಧನೆಗಳು ಪ್ರಾಚೀನ ಶಾಸ್ತ್ರಗಳಿಗೆ ಹೊಸ ಬೆಳಕನ್ನು ನೀಡಿದವು. ಅವುಗಳಿಗೆ ಹೆಚ್ಚು ವ್ಯಾಪಕವಾದ ಉದಾರವಾದ ವಿವರಣೆಯನ್ನು ಅವರು ನೀಡಿದ್ದಾರೆ. ಇದನ್ನು ಸರಳವಾಗಿ ತಿಳಿಸಿರುವ ಪೂಜ್ಯ ಹರ್ಷಾನಂದಜಿ ಅವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತಗಳಲ್ಲಿ ಅವರ ಅನೇಕ ಗ್ರಂಥಗಳು ಪ್ರಕಟವಾಗಿವೆ. ಇವರು ಹಿಂದೂ ವಿಶ್ವಕೋಶವನ್ನು ಇಂಗ್ಲಿಷಿನಲ್ಲಿ ರಚಿಸಿದ್ದಾರೆ.

ಅವುಗಳಲ್ಲಿ ವೇದಾಂತದರ್ಶನವು ಮತ್ತೆ **ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ** ಎಂಬ ಮೂರು ಪ್ರಧಾನ ಸಂಪ್ರದಾಯಗಳಾಗಿ (ಅಥವಾ ಮತ) ವಿಭಜಿಸಲ್ಪಟ್ಟಿದೆ. ಈ ಮೂರರಲ್ಲಿ ಶಂಕರಭಗವತ್ಪಾದರಿಂದ ಪ್ರತಿಪಾದಿತವಾದ ಅದ್ವೈತ ವೇದಾಂತವು ಹೆಚ್ಚು ಪ್ರಚಾರದಲ್ಲಿದೆ.

## ಅದ್ವೈತ ವೇದಾಂತ

ಈ ಮತದ ಪ್ರಕಾರ ಬ್ರಹ್ಮವೊಂದೇ ಸತ್ಯ. ಸಚ್ಚಿದಾನಂದವೇ ಅದರ ಸ್ವರೂಪ. ನಿರ್ಗುಣವೂ ನಿರಾಕಾರವೂ ಆದ ಆ ಬ್ರಹ್ಮನಿಂದಲೇ, ಅದರ ಮಾಯಾಶಕ್ತಿಯ ಪ್ರಭಾವದಿಂದ ಅಭಿವ್ಯಕ್ತವಾಗಿರುವ ಈ ಜಗತ್ತಾಗಲಿ, ಇದರಲ್ಲಿರುವ ಅಸಂಖ್ಯಾತ ಜೀವರುಗಳಾಗಲಿ, ಪರಮಾರ್ಥವಾಗಿ ಸತ್ಯವಲ್ಲ, ಕೇವಲ ತೋರ್ಕೆ. ಆದುದರಿಂದ ಅವು ಮಿಥ್ಯೆ. ನಸುಗತ್ತಲಿನಲ್ಲಿ ಹಗ್ಗವು ಹಾವಾಗಿ ಕಂಡಾಗ ಹಾವು ಮಿಥ್ಯೆ, ಹಗ್ಗವೇ ಸದಾಕಾಲಕ್ಕೂ ಸತ್ಯ. ಇಲ್ಲಿಯೂ ಹಾಗೆಯೇ. ಜೀವಾತ್ಮರಿಗೆ ಅನಾದಿಯಾದ ಅಜ್ಞಾನದಿಂದ ದೇಹೇಂದ್ರಿಯಗಳೊಡನೆ ತಾದಾತ್ಮ್ಯವುಂಟಾಗಿ ದ್ವೈತರೂಪದ ಪ್ರಪಂಚವು ತೋರಿಕೊಳ್ಳುತ್ತದೆ, ತನ್ಮೂಲಕ ಕಾಮ (ಬೇಕು–ಬೇಡಗಳೆಂಬ ಆಸೆ), ಅದರಿಂದ ಕರ್ಮ, ತತ್ಫಲವಾಗಿ ಜನ್ಮ ಅಂದರೆ ಪುನರ್ಜನ್ಮರೂಪವಾದ ಬಂಧನ ಒಂದಾದ ಮೇಲೊಂದು ಬರುತ್ತದೆ. ಇದನ್ನೇ ಸಂಸಾರ ಎನ್ನುವುದು.

ಈ ಬಂಧನವನ್ನು ನೀಗಿಕೊಳ್ಳಲು ಇರುವ ಏಕಮಾತ್ರ ಉಪಾಯವೆಂದರೆ ಆತ್ಮಜ್ಞಾನ, ಎಂದರೆ, ಗುರೂಪದೇಶದ ಮೂಲಕ ತಾನು ದೇಹೇಂದ್ರಿಯಾದಿಗಳನ್ನು ಮೀರಿರುವ ಸಚ್ಚಿದಾನಂದ ತತ್ತ್ವವೆಂಬ ಸತ್ಯದ ಮೇಲೆ ಮನನ, ನಿದಿಧ್ಯಾಸನಗಳನ್ನು (ಅಥವಾ ಉಪಾಸನೆ) ಮಾಡಿ ಸಾಕ್ಷಾತ್ಕರಿಸಿಕೊಳ್ಳುವುದು. ಆತ್ಮವೇ ಬ್ರಹ್ಮವಾದುದರಿಂದ ಆತ್ಮಸಾಕ್ಷಾತ್ಕಾರವೇ ಬ್ರಹ್ಮಸಾಕ್ಷಾತ್ಕಾರ. ಇದು ಸಿದ್ಧಿಯಾದಾಗ ಜಗದ್ರೂಪದ ಭ್ರಮೆಯು ನಿರಸನಗೊಂಡು ಎಲ್ಲೆಲ್ಲಿಯೂ ಏಕವೂ ಅದ್ವಿತೀಯವೂ ಆದ ಬ್ರಹ್ಮವೇ ಅನುಭವಕ್ಕೆ ಬರುತ್ತದೆ. ಆತ್ಮಜ್ಞಾನವಾದ ಮೇಲೂ ಪ್ರಾರಬ್ಧಕರ್ಮವು ಇನ್ನೂ ಉಳಿದಿದ್ದರೆ, ಅಂತಹ ಜೀವನ್ಮುಕ್ತನು ಇತರರಂತೆಯೇ ನಡೆದುಕೊಳ್ಳುತ್ತ ಕಾಲಯಾಪನೆ ಮಾಡುತ್ತಾನೆ. ಆದರೆ ಅವನ ಆಂತರ್ಯದಲ್ಲಿ ಆತ್ಮಾನುಭವವು ಸತತವಾಗಿ ಇರುತ್ತದೆ. ಕಡೆಯಲ್ಲಿ ದೇಹವು ಬಿದ್ದಾಗ, ನದಿಯು ಸಮುದ್ರದಲ್ಲಿ ಒಂದಾಗುವಂತೆ, ಅವನು ಬ್ರಹ್ಮದಲ್ಲಿ ಐಕ್ಯನಾಗುತ್ತಾನೆ.

## ಶ್ರೀರಾಮಕೃಷ್ಣರ ವೇದಾಂತದರ್ಶನ

**ಉಪೋದ್ಘಾತ:** ಇಲ್ಲಿ ಒಂದು ವಿಷಯವನ್ನು ನೆನಪಿನಲ್ಲಿಡಬೇಕು. ಶ್ರೀರಾಮಕೃಷ್ಣರು ಎಂದಿಗೂ ವ್ಯವಸ್ಥಿತ ರೂಪದಲ್ಲಿ ತಮ್ಮ ತತ್ತ್ವವನ್ನು ಅಥವಾ ದರ್ಶನವನ್ನು ಉಪದೇಶಿಸಲಿಲ್ಲ. ಅವರು ಕಠೋರಸಾಧನೆಯ ಮೂಲಕ ಸತ್ಯಸಾಕ್ಷಾತ್ಕಾರ ಮಾಡಿಕೊಂಡು, ಆ ಅನುಭವದ ನೆಲೆಗಟ್ಟಿನ ಮೇಲೆ ನಿಂತು, ನಿರರ್ಗಳವಾಗಿ ಉಪದೇಶಿಸಿದರು. ಅವರು ವಿವಿಧ ಸಂದರ್ಭಗಳಲ್ಲಿ ನೀಡಿದ ಉಪದೇಶಗಳನ್ನು ವ್ಯವಸ್ಥಿತ ರೂಪದಲ್ಲಿ ಸಂಗ್ರಹಿಸಿ ಅವರ 'ದರ್ಶನ'ವನ್ನು ಕಂಡುಕೊಳ್ಳಬೇಕಷ್ಟೆ.

**ಬ್ರಹ್ಮ :** ಶ್ರೀಶಂಕರಾಚಾರ್ಯರಂತೆ ಶ್ರೀರಾಮಕೃಷ್ಣರೂ ಪರಬ್ರಹ್ಮವೇ ಅತ್ಯುಚ್ಚ ಮತ್ತು ಏಕೈಕ ಸತ್ಯವೆಂದು ಒಪ್ಪುತ್ತಾರೆ. ಆದರೆ ಯಾವುದು ನಿರಾಕಾರ ನಿರ್ಗುಣ ಬ್ರಹ್ಮವೋ ಅದೇ ಸಾಕಾರ ಸಗುಣ ಈಶ್ವರನೂ ಹೌದೆನ್ನುತ್ತಾರೆ. ಅಷ್ಟೇ ಅಲ್ಲ, ಆ ಪರಬ್ರಹ್ಮವಸ್ತುವು ಇವೆರಡನ್ನೂ ಮೀರಿಯೂ ಇರಬಲ್ಲದೆಂದೂ ಅದರ ಸತ್ಯತ್ವವು ಅದಕ್ಕೆ ಮಾತ್ರ ಗೊತ್ತಿದೆ ಎಂದೂ ಹೇಳುತ್ತಾರೆ.

ಆ ಪರಬ್ರಹ್ಮಕ್ಕೆ ಎರಡೂ ಮುಖಗಳುಂಟು – **ನಿತ್ಯ ಮತ್ತು ಲೀಲಾ.** ಸೃಷ್ಟಿಸ್ಥಿತಿಪ್ರಲಯಗಳನ್ನು ಮಾಡದೆ ಸುಮ್ಮನೆ ತನ್ನಷ್ಟಕ್ಕೆ ತಾನಿದ್ದರೆ ಅದು **'ನಿತ್ಯ.'** ಸೃಷ್ಟ್ಯಾದಿಗಳನ್ನು ಮಾಡುವಾಗ ಅದು **'ಲೀಲಾ.'** ಇದನ್ನು ಶ್ರೀರಾಮಕೃಷ್ಣರು ಶಕ್ತಿ, ಕಾಳೀ (ಅಥವಾ ಈಶ್ವರ) ಎಂದು ಕರೆಯುತ್ತಾರೆ. **ಬ್ರಹ್ಮ ಮತ್ತು ಕಾಳೀ** – ಇವು ಅಭಿನ್ನ ಎಂದು ಹೇಳಿ ಅವನ್ನು ಕ್ರಮವಾಗಿ ಮಲಗಿರುವ ಹಾವಿಗೂ, ಹಾಗೂ (ಅದೇ) ಎದ್ದು ಓಡಾಡುತ್ತಿರುವ ಹಾವಿಗೂ ಹೋಲಿಸುತ್ತಾರೆ.

**ಮಾಯೆ:** ಇನ್ನು ಮಾಯೆಯ ವಿಷಯ. ಹಾವಿನ ವಿಷವು ಹಾವಿಗೆ ಯಾವ ತೊಂದರೆಯನ್ನೂ ಮಾಡದು. ಆದರೆ ಅದರ ಪರಿಣಾಮ ಅದು ಕಚ್ಚಿದ ಪ್ರಾಣಿಯ ಮೇಲಾಗುವುದು. ಹಾಗೆಯೇ ಪರಬ್ರಹ್ಮದ ಶಕ್ತಿಯಾದ ಮಾಯೆಯ ಪರಿಣಾಮವು ಜೀವರ ಮೇಲಾದರೂ, ಪರಬ್ರಹ್ಮ ತತ್ತ್ವಕ್ಕೆ ಅದರಿಂದ ಯಾವ ರೀತಿಯ ತೊಂದರೆಯೂ ಆಗದು.

ಶ್ರೀರಾಮಕೃಷ್ಣರು ಈ ಮಾಯೆಯನ್ನು **'ಅವಿದ್ಯಾಮಾಯೆ'** ಮತ್ತು **'ವಿದ್ಯಾಮಾಯೆ'** ಎಂದು ಎರಡು ವಿಧವಾಗಿ ವಿವರಿಸುತ್ತಾರೆ. ಕಾಲಿಗೆ ತಗುಲಿರುವ ಮುಳ್ಳೊಂದನ್ನು ಮತ್ತೊಂದು ಮುಳ್ಳಿನಿಂದ (ಸೂಜಿ!) ತೆಗೆದುಹಾಕಿ ಅನಂತರ ಎರಡನ್ನೂ ಬಿಸಾಡುವಂತೆ, ವಿವೇಕ–ವೈರಾಗ್ಯಗಳೆಂಬ ವಿದ್ಯಾಮಾಯೆಯ ಮೂಲಕ ಕಾಮಕಾಂಚನ ರೂಪದ ಅವಿದ್ಯಾಮಾಯೆಯನ್ನು ನಿರಸ್ತಗೊಳಿಸಿ, ಅನಂತರ ಎರಡನ್ನೂ ತ್ಯಜಿಸಬೇಕು ಎನ್ನುತ್ತಾರೆ.

**ಜಗತ್ತು:** ಅನಂತರ ಈ ಜಗತ್ತು. ಶ್ರೀರಾಮಕೃಷ್ಣರು ಜಗತ್ತನ್ನು ಮಿಥ್ಯೆ ಎಂದು ಹೇಳದೆ ಅದು ಭಗವಂತನ ಲೀಲೆ, ಆದುದರಿಂದ ಸತ್ಯ; ಆದರೆ ನಿತ್ಯವಲ್ಲ ಎನ್ನುತ್ತಾರೆ. ಹರಿಯುತ್ತಿರುವ ನೀರಿನ ಮೇಲೆ ಕೆಲವೊಮ್ಮೆ ಮಂಜುಗಡ್ಡೆಯ ಹರಳುಗಳು ಕಾಣಿಸಿಕೊಂಡು ಸ್ವಲ್ಪ ಕಾಲದ ನಂತರ ಕರಗಿಹೋಗಿ ನೀರೇ ಆಗುತ್ತದಲ್ಲವೆ? ಹಾಗೆಯೇ ಈ ಜಗತ್ತೂ ಅಶಾಶ್ವತ ಸತ್ಯ ಎಂದು ವಿವರಿಸುತ್ತಾರೆ.

> **ಯಾರೋ ಒಬ್ಬರು ಶ್ರೀರಾಮಕೃಷ್ಣರನ್ನು ತನಗೆ ಒಂದು ಮಾತಿನಲ್ಲಿಯೇ ಜ್ಞಾನವನ್ನು ಉಪದೇಶಿಸಿ ಎಂದು ಕೇಳಿಕೊಂಡರು. ಅದಕ್ಕೆ ಅವರು, 'ಬ್ರಹ್ಮ ಒಂದೇ ಸತ್ಯ; ಜಗತ್ತು ಮಿಥ್ಯೆ, ಇದನ್ನು ಸಾಕ್ಷಾತ್ಕಾರ ಮಾಡಿಕೊಂಡು, ಮೌನವಾಗಿರು" ಎಂದರು.**

ಮತ್ತೊಂದು ದೃಷ್ಟಾಂತ. ಮಹಡಿಯನ್ನೇರುವವನು ಮೆಟ್ಟಿಲುಗಳನ್ನು ಹತ್ತುವಾಗ ಇವು ಮಹಡಿಯಲ್ಲ ಎನ್ನುತ್ತ, ಮೇಲೆ ತಲುಪಿದ ನಂತರ ಮೆಟ್ಟಿಲೂ ಮಹಡಿಯೂ ಒಂದೇ ವಸ್ತುವಿನಿಂದಾಗಿದೆ ಎಂದರಿಯುತ್ತಾನೆ. ಹಾಗೆಯೇ ಜ್ಞಾನಿಯು ಮೊದಲು 'ನೇತಿ ನೇತಿ' ('ಇದಲ್ಲ, ಇದಲ್ಲ') ಎಂದು ಜಗತ್ತನ್ನು (ಅಸತ್ಯವೆಂದು) ಕಡೆಗಣಿಸಿದರೂ, ಬ್ರಹ್ಮಜ್ಞಾನವಾದ ಮೇಲೆ ಈ ಜಗತ್ತೂ ಬ್ರಹ್ಮವೇ ಎಂಬುದನ್ನು ಅರಿತು ಅದರಲ್ಲೂ ಬ್ರಹ್ಮವನ್ನೇ ಕಾಣುತ್ತಾನೆ. ಇಂಥವನನ್ನು ಶ್ರೀರಾಮಕೃಷ್ಣರು 'ವಿಜ್ಞಾನಿ' ಎಂದು ಕರೆದಿದ್ದಾರೆ.

**ಅವತಾರ:** ಪರಬ್ರಹ್ಮದ ಸಗುಣ ಸಾಕಾರ ರೂಪವು ನಿರ್ಗುಣ ನಿರಾಕಾರ ರೂಪದಷ್ಟೇ ಸತ್ಯ. ಆದುದರಿಂದ ಬ್ರಹ್ಮಸಾಕ್ಷಾತ್ಕಾರಕ್ಕೆ ಭಕ್ತಿಮಾರ್ಗವೂ ಜ್ಞಾನಮಾರ್ಗದಷ್ಟೇ ಪರಿಣಾಮಕಾರಿ ಎಂದ ಮೇಲೆ ಪರಬ್ರಹ್ಮದ ಪ್ರತಿಯೊಂದು ಅವತಾರವೂ ಬ್ರಹ್ಮವೇ. ಅವತಾರದ ಸಾಕ್ಷಾತ್ಕಾರದಿಂದ ಬ್ರಹ್ಮಸಾಕ್ಷಾತ್ಕಾರವೇ ಸಿದ್ಧಿಸುತ್ತದೆ. "ಗಂಗಾನದಿಯನ್ನು ಮುಟ್ಟಬೇಕಾದರೆ ಗೋಮುಖದಿಂದ ಗಂಗಾಸಾಗರದವರೆಗೆ ಮುಟ್ಟಬೇಕಾಗಿಲ್ಲ, ದಕ್ಷಿಣೇಶ್ವರದಲ್ಲಿ ಮುಟ್ಟಿದರೆ ಸಾಕು!" ಎನ್ನುತ್ತಾರೆ ಶ್ರೀರಾಮಕೃಷ್ಣರು.

**ಅಂತರ್ಯಾಮಿ:** ಜಗತ್ತು ಬ್ರಹ್ಮವೇ ಆದುದರಿಂದ ಇದರಲ್ಲಿರುವ ಪ್ರತಿಯೊಂದು ವಸ್ತುವೂ, ವ್ಯಕ್ತಿಯೂ ಬ್ರಹ್ಮವೇ. ಆದರೆ ಆ ಬ್ರಹ್ಮದ ಅಭಿವ್ಯಕ್ತಿ ಎಲ್ಲದರಲ್ಲೂ ಒಂದೇ ರೀತಿಯಾಗಿರುವುದಿಲ್ಲ. ಗಂಗೆಯ ನೀರು, ಬಾವಿಯ ನೀರು, ಚರಂಡಿಯ ನೀರು – ಎಲ್ಲವೂ ನೀರೇ ಆದರೂ ಚರಂಡಿಯ ನೀರನ್ನು ದೂರದಿಂದಲೇ ತ್ಯಜಿಸಬೇಕು. ಎಲ್ಲರಲ್ಲೂ ನಾರಾಯಣನೇ ಇರುವುದು ಸತ್ಯವಾದರೂ 'ವ್ಯಾಘ್ರನಾರಾಯಣ'ನಿಗೆ (ಹುಲಿ) ದೂರದಿಂದಲೇ ನಮಸ್ಕರಿಸಬೇಕು ಎಂದು ಶ್ರೀರಾಮಕೃಷ್ಣರು ಹಾಸ್ಯಮಾಡುತ್ತಾರೆ.

**ಜೀವಾತ್ಮ:** ನಿಜವಾಗಿ ನೋಡಿದರೆ ಜೀವಾತ್ಮ–ಪರಮಾತ್ಮರಲ್ಲಿ ಭೇದವಿಲ್ಲ. ಹರಿಯುತ್ತಿರುವ ನೀರಿನಲ್ಲಿ ಮರದ ಹಲಗೆಯೊಂದನ್ನು ನೇರವಾಗಿಟ್ಟರೆ, ನೀರು ಎರಡು ಭಾಗವಾಗಿರುವಂತೆ

ಕಾಣುತ್ತದೆ. ಹಾಗೆಯೇ ಮಾಯೆಯ ಪ್ರಭಾವದಿಂದ ಪರಮಾತ್ಮನೇ ಎರಡು ರೂಪಗಳಲ್ಲಿ ತೋರಿಕೊಳ್ಳುತ್ತಾನೆ. ಅಥವಾ ನೀರಿನ ಮೇಲಿನ ಗುಳ್ಳೆಯೂ ನೀರೇ ಆಗಿರುವಂತೆ ಜೀವಾತ್ಮನೂ ಪರ ಮಾತ್ಮನೇ ಆಗಿದ್ದಾನೆ. ಆದರೂ ಜೀವನು ನಿಯಮ್ಯ, ಪರ ಮಾತ್ಮನು ನಿಯಾಮಕ ಎನ್ನುವುದನ್ನು ವ್ಯವಹಾರದ ಮಟ್ಟದಲ್ಲಿ ಒಪ್ಪಲೇಬೇಕು. ಹಾಗೆಯೇ ಈ ಜೀವರು ನಾಲ್ಕು ವಿಧ ಎನ್ನುವುದನ್ನು ಒಪ್ಪಬೇಕು. ಅವರಾರೆಂದರೆ: **ಬದ್ಧ, ಮುಮುಕ್ಷು, ಮುಕ್ತ** ಮತ್ತು **ನಿತ್ಯಮುಕ್ತ.**

ನಿತ್ಯಮುಕ್ತರು ಲೋಕಗುರುಗಳು. ಮುಕ್ತರು ಜೀವನದ ಗುರಿಯನ್ನು ತಲುಪಿರುವವರು. ಬದ್ಧರು ಮುಕ್ತಿಯ ಕಲ್ಪನೆಯೂ ಇಲ್ಲದೆ ಸಂಸಾರಚಕ್ರದಲ್ಲಿ ತೊಳಲಾಡುತ್ತಿರುವವರು. ಆದುದರಿಂದ ಸಾಧನಶಾಸ್ತ್ರವು ಉಪದಿಷ್ಟವಾಗಿರುವುದೇ ಮೋಕ್ಷವನ್ನು ಬಯಸುತ್ತಿರುವ ಮುಮುಕ್ಷುಗಳಿಗಾಗಿ.

**ಸಾಧನೆ:** ಇದರ ಗುರಿ 'ಈಶ್ವರಲಾಭ'ದಿಂದ, ಭಗವತ್ಸಾಕ್ಷಾತ್ಕಾರದಿಂದ, ಮೋಕ್ಷವನ್ನು ಪಡೆಯುವುದು. ಇದಕ್ಕೆ ಜ್ಞಾನ ಮಿಶ್ರಿತ ಭಕ್ತಿಯೇ ಅತ್ಯುತ್ತಮ ಸಾಧನ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಕೇವಲ ಜ್ಞಾನಮಾರ್ಗದಲ್ಲಿ ಬುದ್ಧಿಯು ಶುಷ್ಕವಾಗಬಹುದು, ಹೃದಯವು ಮರುಭೂಮಿಯಾಗಬಹುದು. ಕೇವಲ ಭಕ್ತಿಮಾರ್ಗವೂ ಭಾವನಾತ್ಮಕತೆಯ ಅತಿರೇಕವಾಗಬಹುದು. ಆದುದರಿಂದಲೇ ಇವೆರಡರ ಮಧುರ ಮಿಶ್ರಣವು ಅತ್ಯಂತ ಅವಶ್ಯಕ.

**ಮುಕ್ತಪುರುಷ:** ಮುಕ್ತಪುರುಷನ ಲಕ್ಷಣಗಳ ಬಗ್ಗೆ ಶ್ರೀರಾಮಕೃಷ್ಣರು ಬಹುಮಟ್ಟಿಗೆ ಶಾಸ್ತ್ರಗಳ ವಿವರಣೆಯನ್ನೇ ಅನುಸರಿಸುತ್ತಾರೆ. ಅವನು ಎಲ್ಲೆಲ್ಲೂ ಬ್ರಹ್ಮವನ್ನೇ ಕಾಣುತ್ತಿರುತ್ತಾನೆ. ಅಂತರ್ಯದಲ್ಲಿ ಸದಾ ಆನಂದವನ್ನು ಅನುಭವಿಸುತ್ತಿರುತ್ತಾನೆ. ಬಾಹ್ಯದಲ್ಲಿ ಅದನ್ನು ತೋರಿಸದೆ ಕೆಲವೊಮ್ಮೆ ಜಡನಂತೆ, ಹುಚ್ಚನಂತೆ ಕಾಣಬಹುದು. ಲೋಕದ ವಿವಿಧ ಅನುಭವಗಳು ಅವನ ಮೇಲೆ ಪರಿಣಾಮ ಬೀರವು. ಆದರೆ ಅವನ ಜೀವನವಿರುವುದೇ ಇತರರ ಉದ್ಧಾರಕ್ಕಾಗಿ. ನಿರ್ವಿಕಲ್ಪ ಸಮಾಧಿಯನ್ನು ಪಡೆದ ಮಹಾತ್ಮರು ಇಪ್ಪತ್ತೊಂದು ದಿವಸಗಳ ನಂತರ ದೇಹವನ್ನು ತ್ಯಜಿಸುತ್ತಾರೆಂದೂ, ಅವರಲ್ಲಿ ಕೆಲವರು ಲೋಕೋದ್ಧಾರಕ್ಕಾಗಿ ಹಿಂತಿರುಗಿ ಬರುವರೆಂದೂ ಸಹ ಶ್ರೀರಾಮಕೃಷ್ಣರು ಹೇಳಿದ್ದಾರೆ. ಶ್ರೀರಾಮಕೃಷ್ಣರು ಪ್ರಾರಬ್ಧಕರ್ಮವನ್ನು ಒಪ್ಪಿದರೂ, ಅದರ ತೀವ್ರತೆಯನ್ನು ಭಗವನ್ನಾಮ ಜಪದ ಮೂಲಕ ಕಡಮೆ ಮಾಡಿಕೊಳ್ಳಬಹುದು ಎಂದು ನುಡಿದಿದ್ದಾರೆ.

**ಮತಭೇದಕ್ಕೆ ಕಾರಣ:** ವಿವಿಧ ದರ್ಶನಗಳಲ್ಲಿ, ವಿವಿಧ ಮತಗಳಲ್ಲಿ, ಇಷ್ಟೊಂದು ಭಿನ್ನಾಭಿಪ್ರಾಯಗಳಿವೆಯಲ್ಲ, ಏಕೆ? ಈ ಪ್ರಶ್ನೆಗೆ ಶ್ರೀ ರಾಮಕೃಷ್ಣರು ಎರಡು ಸ್ತರಗಳ ದೃಷ್ಟಿಕೋಣದಿಂದ ಉತ್ತರವೀಯುತ್ತಾರೆ: **ಆಂತರಿಕ, ಬಾಹ್ಯ.**

ಹೇಗೆ ಆರು ಜನ ಅಂಧರು ಒಂದೇ ಆನೆಯನ್ನು ಬೇರೆ ಬೇರೆ ಭಾಗಗಳಲ್ಲಿ ಸ್ಪರ್ಶಿಸಿ ಬೇರೆ ಬೇರೆ ವಿವರಣೆಗಳನ್ನು ಕೊಡುತ್ತಾರೋ, ಅದೇ ರೀತಿ, ಅಪೂರ್ಣವಾಗಿ ಬ್ರಹ್ಮದರ್ಶನ ಮಾಡಿದವರು ಕೊಡುವ ವಿವರಣೆಗಳೂ ಭಿನ್ನಭಿನ್ನವಾಗಿರಬಹುದು. ಇದು **ಆಂತರಿಕ ದೃಷ್ಟಿಕೋಣ.**

ದೊಡ್ಡ ಕಲ್ಲುಸಕ್ಕರೆಯ ಬೆಟ್ಟವನ್ನು ಸಾವಿರಾರು ಇರುವೆಗಳು ಮುತ್ತಿದರೂ ಅದನ್ನು ಖಾಲಿ ಮಾಡಲು ಸಾಧ್ಯವಿಲ್ಲ. ಶುಕ ಮಹರ್ಷಿಯಂಥ ಪರಮಹಂಸರೂ ಸ್ವಲ್ಪ ದೊಡ್ಡ ತುಣುಕನ್ನು ಮಾತ್ರ ತರಬಲ್ಲರಷ್ಟೆ. ಪರಬ್ರಹ್ಮವು ಅಪಾರ, ಅನಂತ. ಆದುದರಿಂದ ಯಾರೂ ಅದನ್ನು ಪೂರ್ಣವಾಗಿ ಅರಿಯಲಾರರು. ಸಮುದ್ರದ ಆಳವನ್ನು ಅಳೆಯಲು ಹೊರಟ ಉಪ್ಪಿನ ಗೊಂಬೆ ಹೇಳಹೆಸರಿಲ್ಲದಂತೆ ಕರಗಿಹೋಯಿತಂತೆ. ಹಾಗೆಯೇ ಅನಾದಿ ಅನಂತ ಅಪಾರ ಬ್ರಹ್ಮವನ್ನು ವಿವರಿಸಲು ಯಾರಿಗೂ ಸಾಧ್ಯವಿಲ್ಲ. ಆದುದರಿಂದಲೇ ಯಾರೂ ಬ್ರಹ್ಮದ ಪೂರ್ಣ ವಿವರಣೆಯನ್ನು ಮಾಡಲು ಸಾಧ್ಯವಾಗಿಲ್ಲ. ಈ ಕಾರಣದಿಂದಲೇ ಬ್ರಹ್ಮವು ಎಂದಿಗೂ ಉಚ್ಛಿಷ್ಟವಾಗದು. ಇದು **ಬಾಹ್ಯ ದೃಷ್ಟಿಕೋಣ.**

**ಉಪಸಂಹಾರ :** ತಮ್ಮ ಹಲವು ಆಧ್ಯಾತ್ಮಿಕ ಅನುಭವಗಳನ್ನು ಆಧರಿಸಿ ಶ್ರೀರಾಮಕೃಷ್ಣರು ನಮಗಿತ್ತಿರುವ ಉಪದೇಶವು ಇತರ ವೇದಾಂತದರ್ಶನಗಳಿಗೆ ತುಂಬ ಸಮೀಪವಾಗಿರುವಂತೆ ಕಂಡರೂ ಅದಕ್ಕೆ ತನ್ನದೇ ಆದ ವೈಶಿಷ್ಟ್ಯ, ಕಂಪು, ಮೆರಗು ಇದೆ ಎನ್ನಬಹುದು ಎಂದಮೇಲೆ ಈ ಶ್ರೀರಾಮಕೃಷ್ಣ ವೇದಾಂತ ದರ್ಶನವು ತೀವ್ರ ಸಂಶೋಧನೆಗೆ ಸಾಕಷ್ಟು ಅವಕಾಶವನ್ನು ಒದಗಿಸಬಲ್ಲದು ಎನ್ನಬಹುದೇ?

ಒಬ್ಬನು ಅರ್ಧರಾತ್ರಿಯಲ್ಲಿ ಎದ್ದು ತಂಬಾಕನ್ನು ಸೇದಬೇಕೆಂದು ಬಯಸಿದನು. ಅವನಿಗೆ ಸ್ವಲ್ಪ ಬೆಂಕಿ ಬೇಕಾಯಿತು. ಅದಕ್ಕಾಗಿ ಪಕ್ಕದ ಮನೆಗೆ ಹೋಗಿ ಬಾಗಿಲನ್ನು ತಟ್ಟಿದನು. ಮನೆಯಾತ ಬಾಗಿಲನ್ನು ತೆಗೆದು ಏನು ಬೇಕೆಂದು ವಿಚಾರಿಸಿದನು. ಅವನ ಕೋರಿಕೆಯನ್ನು ಕೇಳಿ, "ಅಯ್ಯಾ, ಇದು ಏನು ಹುಚ್ಚು? ಈ ಹೊತ್ತಿನಲ್ಲಿ ಎದ್ದು ಬಂದು ನಮ್ಮನ್ನು ಎಚ್ಚರಿಸುತ್ತೀಯಲ್ಲಾ? ನಿನ್ನ ಕೈಯಲ್ಲಿಯೇ ಉರಿಯುವ ದೀಪವಿದೆಯಲ್ಲಾ?" ಎಂದನು. ಮನುಷ್ಯನಿಗೆ ಏನು ಬೇಕೋ ಅದು ಆಗಲೇ ಅವನಲ್ಲಿದೆ. ಆದರೂ ಅದನ್ನು ಹುಡುಕುತ್ತ ಅಲೆಯುತ್ತಿರುವನು. ಹಾಗೆಯೇ ಎಲ್ಲಿಯವರೆಗೆ ದೇವರು ದೂರದಲ್ಲಿದ್ದಾನೆ ಎಂದು ತೋರುವುದೋ ಅಲ್ಲಿಯವರೆಗೆ ಅಜ್ಞಾನವಿರುವುದು. ಆದರೆ ದೇವರನ್ನು ಅಂತರಂಗದಲ್ಲಿ ಕಂಡಾಗ, ನಿಜವಾದ ಜ್ಞಾನ ಬರುವುದು. **– ಶ್ರೀರಾಮಕೃಷ್ಣ**